ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-2530/2017/ಡಿಆರ್ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:13/11/2018

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: 1) ಶ್ರೀ ಮಾಯಣ್ಣ, ಡೆಪ್ಯೂಟಿ ಮ್ಯಾನೇಜರ್, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ಕೋ ಆಪರೇಟೀವ್ ಮಿಲ್ಕ್ ಪ್ರೊಡ್ಯೂಜರ್ಸ್ ಸೊಸೈಟೀಸ್ ಯೂನಿಯನ್ ಲಿಮಿಟೆಡ್, ರಾಮದೇವರ ಬೆಟ್ಟಡ ರಸ್ತೆ, ವಿಜಯನಗರ ರಾಮನಗರ, (2) ಶ್ರೀ ಎಸ್. ನಾಗರಾಜ್, ಕಾರ್ಯದರ್ಶಿ, ಬಿಲ್ಲೆದೊಡ್ಡಿ ಹಾಲು ಉತ್ಪಾದಕರ ಸಂಘ, ಬಿಲ್ಲೆದೊಡ್ಡಿ, ಬಿಡದಿ ಹೋಬಳಿ, ರಾಮನಗರ ಜಿಲ್ಲೆ (3) ಶ್ರೀ ಕೆ.ಎನ್. ನಂಜಯ್ಯ, ಸೂಪರವೈಸರ್, ಬೆಂಗಳೂರು ಜಿಲ್ಲೆ ಕೋ ಆಪರೇಟೀವ್, ಮಿಲ್ಕ್ ಪ್ರಡ್ಯೂಸರ್ಸ್ ಸೊಸೈಟಿ ಯೂನಿಯನ್ ಲಿಮಿಟೆಡ್, ರಾಮದೇವರ ಬೆಟ್ಟದ ರಸ್ತೆ, ವಿಜಯನಗರ ರಾಮನಗರ, (4) ಶ್ರೀ ನರಸಿಂಹಮೂರ್ತಿ, ಉಪನಿಬಂಧಕರು, ಉಪ-ನಿಬಂಧಕರು, ಕೋ ಆಪರೇಟೀವ್ ಸೊಸೈಟಿ, ಕಂದಾಯ ಭವನ, ಬೆಂಗಳೂರು, (5) ಶ್ರೀ ಅಪ್ಪಾಜಿ ಗೌಡ, ಅಸಿಸ್ಟೆಂಟ್ ರಿಜಿಸ್ಟ್ರಾರ್, ಕೋ ಆಪರೇಟೀವ್ ಸೊಸೈಟಿ ಪಿ.ಎಲ್.ಡಿ ಬ್ಯಾಂಕ್ ರಸ್ತೆ, ಐಜೂರು, ರಾಮನಗರ ಹಾಗೂ (6) ಶ್ರೀ ನಾಗರಾಜು, ಮಾಜಿ ಅಧ್ಯಕ್ಷರು, ಬಿಲ್ಲೆದೊಡ್ಡಿ ಹಾಲು ಉತ್ಪಾದಕರ ಸಂಘ, ಬಿಲ್ಲೆದೊಡ್ಡಿ, ಬಿಡದಿ ಹೋಬಳಿ, ರಾಮನಗರ ಜಿಲ್ಲೆ ಇವರುಗಳ ವಿರುದ್ಧ ದಾಖಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಸ್ವಯಂ ಪ್ರೇರಿತ ಅಂತ ಹಿಂದಿನ ಗೌರವಾನ್ವಿತ ಉಪಲೋಕಾಯುಕ್ತ-2 ರವರ ಆದೇಶದಂತೆ (1) ಶ್ರೀ ಮಾಯಣ್ಣ, ಡೆಪ್ಯೂಟಿ ಮ್ಯಾನೇಜರ್, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ಕೋ ಆಪರೇಟೀವ್ ಮಿಲ್ಕ್ ಪ್ರೊಡ್ಯೂಜರ್ಸ್ ಸೊಸೈಟೀಸ್ ಯೂನಿಯನ್ ಲಿಮಿಟೆಡ್, ರಾಮದೇವರ ಬೆಟ್ಟಡ ರಸ್ತೆ, ವಿಜಯನಗರ ರಾಮನಗರ, (2) ಶ್ರೀ ಎಸ್. ನಾಗರಾಜ್, ಕಾರ್ಯದರ್ಶಿ, ಬಿಲ್ಲೆದೊಡ್ಡಿ ಹಾಲು ಉತ್ಪಾದಕರ ಸಂಘ, ಬಿಲ್ಲೆದೊಡ್ಡಿ, ಬಿಡದಿ ಹೋಬಳಿ, ರಾಮನಗರ ಜಿಲ್ಲೆ (3) ಶ್ರೀ ಕೆ.ಎನ್. ನಂಜಯ್ಯ, ಸೂಪರವೈಸರ್, ಬೆಂಗಳೂರು ಜಿಲ್ಲೆ ಕೋ ಆಪರೇಟೀವ್, ಮಿಲ್ಕ್ ಪ್ರಡ್ಯೂಸರ್ಸ್ ಸೊಸೈಟಿ ಯೂನಿಯನ್ ಲಿಮಿಟೆಡ್, ರಾಮದೇವರ ಬೆಟ್ಟದ ರಸ್ತೆ, ವಿಜಯನಗರ ರಾಮನಗರ, (4) ಶ್ರೀ ನರಸಿಂಹಮೂರ್ತಿ, ಉಪನಿಬಂಧಕರು, ಉಪ-ನಿಬಂಧಕರು, ಕೋ ಆಪರೇಟೀವ್ ಸೊಸೈಟಿ, ಕಂದಾಯ ಭವನ, ಬೆಂಗಳೂರು, (5) ಶ್ರೀ ಅಪ್ಪಾಜಿ ಗೌಡ, ಅಸಿಸ್ಟೆಂಟ್ ರಿಜಿಸ್ಟ್ರಾರ್, ಕೋ ಆಪರೇಟೀವ್ ಸೊಸೈಟಿ

ಪಿ.ಎಲ್.ಡಿ ಬ್ಯಾಂಕ್ ರಸ್ತೆ. ಐಜೂರು. ರಾಮನಗರ ಹಾಗೂ (6) ಶ್ರೀ ನಾಗರಾಜು. ಮಾಜಿ ಅಧ್ಯಕ್ಷರು. ಬಿಲ್ಲೆದೊಡ್ಡಿ ಹಾಲು ಉತ್ಪಾದಕರ ಸಂಘ. ಬಿಲ್ಲೆದೊಡ್ಡಿ. ಬಿಡದಿ ಹೋಬಳಿ. ರಾಮನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದಾಖಲಿಸಿ ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರಿನ ಸಂಕ್ಷಿಪ್ತ ವಿವರ:

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಬಿಲ್ಲೇದೊಡ್ಡಿ ಗ್ರಾಮದ ಹಾಲು ಉತ್ಪಾದಕರಾದ ಶ್ರೀ ನಾಗರಾಜ ಎನ್ನುವವರು ಕಾರ್ಯದರ್ಶಿಗಳ ವಿರುದ್ಧ ದೂರು ಕೊಟ್ಟು ಹಾಲು ಉತ್ಪಾದಕ ಸಂಘದ ಡೈರಿಗೆ ಹಾಕಿದ ಹಾಲಿಗೆ ಸರಿಯಾಗಿ ಹಣವನ್ನು ಕೊಡದೇ ದಾಖಲೆಗಳನ್ನು ನಿರ್ವಹಿಸದೇ ಹಣ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಲೆಕ್ಕ ಪುಸ್ತಕ ಮತ್ತು ಖರ್ಚು ವೆಚ್ಚದ ಪುಸ್ತಕವನ್ನು ಸರಿಯಾಗಿ ನಿರ್ವಹಿಸದೇ ಮಾರಾಟವಾದ ಹಾಲಿನ ಹಣದ ಬಗ್ಗೆ ದಾಖಲೆಗಳನ್ನು ನಿರ್ವಹಿಸದೇ ಹಾಲಿನ ಅಳತೆ ಮಾಡುವ ತೂಕದ ಯಂತ್ರವನ್ನು ಹೊಂದಿಸಿಕೊಂಡು ಹೆಚ್ಚು ಹಾಲಿಗೆ ಕಡಿಮೆ ಮೊತ್ತವನ್ನು ನೀಡಿದ್ದಾರೆ, ಸರ್ಕಾರದಿಂದ ಹಾಲು ಉತ್ಪಾದಕರಿಗೆ ಸಿಗುವ ರೂ.2 ಗಳ ಪ್ರೋತ್ಸಾಹದ ಹಣವನ್ನು ನೀಡದೇ ಪ್ರತ್ಯೇಕವಾದ ಲೆಕ್ಕ ಪುಸ್ತಕವನ್ನು ನಿರ್ವಹಿಸದೇ ಒಬ್ಬರ ಹೆಸರಿನಲ್ಲಿ ಎರಡೆರಡೂ ಬಾರಿ ಹಣವನ್ನು ಪಡೆದು ಸುಳ್ಳು ಲೆಕ್ಕಗಳನ್ನು ತೋರಿಸಿದ್ದಾರೆ ಎಂದು ಆಪಾದಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಎಲ್ಲಾ ಸಹಕಾರ ಸಂಘದ ಅಧಿಕಾರಿಗಳಿಗೆ ದೂರು ಕೊಟ್ಟರೂ ಸಹ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಸಂಘದ ಲೆಕ್ಕ-ಪತ್ರಗಳನ್ನು ಆಡಿಟ್ ಮಾಡಿಸಲಿಲ್ಲ. ಕಾರ್ಯದರ್ಶಿಯೊಂದಿಗೆ ಕೈಜೋಡಿಸಿ ಅಪರಾಧಿಕ ಒಳಸಂಚು ಮಾಡಿದ್ದಾರೆ. ಆದ್ದರಿಂದ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಮಾನ್ಯ ವಿಶೇಷ ಸತ್ರ ನ್ಯಾಯಾಲಯ ರಾಮನಗರ ಇವರಲ್ಲಿ ಪಿ.ಸಿ.ಆರ್. ನಂ.3/2013 ಅನ್ನು ಸಲ್ಲಿಸಿದ್ದರು. ಆ ಪ್ರಕರಣದ ತನಿಖೆಯನ್ನು ರಾಮನಗರ ಸತ್ರ ನ್ಯಾಯಾಲಯವು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ರಾಮನಗರ (ಇನ್ನುಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರಿಗೆ ವಹಿಸಿದ್ದರು. ಪೊಲೀಸ್ ಉಪಾಧೀಕ್ಷಕರು, ರಾಮನಗರ ಜಿಲ್ಲಾ ಲೋಕಾಯುಕ್ತ ಠಾಣಾ ಮೊ.ನಂ.7/2013 ಕಲಂ 13(1)(ಸಿ) ಸಹ ಕಲಂ 13(2) ಲಂಚ ನಿರೋಧಕ ಕಾಯ್ದೆ ಹಾಗೂ ಕಲಂ 465, 468, 477(ಎ) ಸಹ ಕಲಂ 120(ಬಿ) ಐ.ಪಿ.ಸಿ. ರಂತೆ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಮಾಡಿರುತ್ತಾರೆ.

N. Anand

3. ಸದರಿ ಪ್ರಕರಣದಲ್ಲಿ ತನಿಖಾಧಿಕಾರಿಯು ತನಿಖೆಯನ್ನು ಪೂರ್ಣಗೊಳಿಸಿ ಮೇಲೆ ವಿವರಿಸಿದ ಎದುರುದಾರರಲ್ಲಿ 4ನೇ ಎದುರುದಾರರ ವಿರುದ್ಧ ಯಾವುದೇ ಆರೋಪಗಳು ಮೇಲ್ನೋಟಕ್ಕೆ ಕಂಡುಬಾರದ ಕಾರಣ ಅವರನ್ನು ಸದರಿ ಪ್ರಕರಣದಿಂದ ಕೈಬಿಟ್ಟಿರುತ್ತಾರೆ. ಸದರಿ ಪ್ರಕರಣದ ಅಂತಿಮ ತನಿಖಾ ವರದಿಯ ಪ್ರತಿಯನ್ನು ಈ ಸಂಸ್ಥೆಗೆ ತನಿಖಾಧಿಕಾರಿಯು ಸಲ್ಲಿಸಿದ್ದು, ಅದನ್ನು ಪರಿಶೀಲಿಸಿ ಎದುರುದಾರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9 ರಡಿಯಲ್ಲಿ ತನಿಖೆಯನ್ನು ಕೈಗೊಳ್ಳಲು ಸ್ವಯಂ ಪ್ರೇರಿತ ದೂರನ್ನು ದಾಖಲಿಸುವ ಸಲುವಾಗಿ ಮೇಲ್ನೋಟಕ್ಕೆ ಅಂಶಗಳಿರುವ ಕಾರಣ ಈ ದೂರನ್ನು ದಾಖಲಿಸಲಾಗಿದೆ. ತನಿಖಾಧಿಕಾರಿಯು ಸಲ್ಲಿಸಿರುವ ಅಂತಿಮ ತನಿಖಾ ವರದಿಯಲ್ಲಿ ಈ ಪ್ರಕರಣದ 1 ರಿಂದ 3 ಮತ್ತು 5ನೇ ಎದುರುದಾರರ ವಿರುದ್ಧ ಈ ಕೆಳಕಂಡಂತೆ ಆರೋಪಗಳನ್ನು ಮಾಡಲಾಗಿದೆ.

4. 1ನೇ ಎದುರುದಾರರು ಉಪ-ವ್ಯವಸ್ಥಾಪಕರು, ಎಂದು ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕೆಲಸ ಮಾಡುತ್ತಿದ್ದು, ಬೆಂಗಳೂರು ಹಾಲು ಒಕ್ಕೂಟದಿಂದ ಒದಗಿಸುವ ಎಲ್ಲಾ ಸೌಲಭ್ಯಗಳು ಹಾಗೂ ಸರ್ಕಾರದ ಯೋಜನೆಗಳು, ತಾಂತ್ರಿಕ ಸಲಹೆಗಳನ್ನು, ಹಾಲಿನ ಗುಣಮಟ್ಟವನ್ನು ವಿಸ್ತರಣಾಧಿಕಾರಿಗಳ ಮುಖಾಂತರ, ಪಶು ವೈದ್ಯರ ಮುಖಾಂತರ ಹಾಲು ಉತ್ಪಾದಕರಿಗೆ ತಿಳಿಸುವ ಜವಾಬ್ದಾರಿವುಳ್ಳವರಾಗಿದ್ದು, ಕೇವಲ ಮೌಖಿಕವಾಗಿ ವಿಸ್ತರಣಾಧಿಕಾರಿಗಳಿಂದ ಮಾಹಿತಿ ಪಡೆದು ಮೌಖಿಕವಾಗಿಯೇ ಕಾರ್ಯಕಾರಿ ಮಂಡಳಿಯ ಸದಸ್ಯರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದೇನೆ ಅಂತ ಹೇಳುತ್ತಿದ್ದು ಹಣದ ಅವ್ಯವಹಾರದ ವಿಷಯದಲ್ಲಿ ಮೌಖಿಕ ದೂರನ್ನಾಗಲೀ ಮೌಖಿಕ ತಿಳುವಳಿಕೆಯನ್ನಾಗಲೀ ಕೊಡಲು ಬರುವುದಿಲ್ಲ ಅಂತ ತಿಳಿದಿದ್ದರೂ ಸಹ ಸಹಕಾರ ಸಂಘದ ಅಧ್ಯಕ್ಷರಾದ 6ನೇ ಎದುರುದಾರರು ಮತ್ತು ಕಾರ್ಯದರ್ಶಿಯಾದ 2ನೇ ಎದುರುದಾರರಿಗೆ ಸಹಕರಿಸುವ ರೀತಿಯಲ್ಲಿ ನಡೆದುಕೊಂಡಿದ್ದಾರೆ ಎನ್ನುವುದು ಕಂಡುಬರುತ್ತದೆ.

5. 2ನೇ ಎದುರುದಾರರು ಬಿಲ್ಲೇದೊಡ್ಡಿ ಹಾಲು ಉತ್ಪಾದಕರ ಸಂಘದ ಕಾರ್ಯದರ್ಶಿಯಾಗಿದ್ದು, 2006ನೇ ಸಾಲಿನಿಂದ 2013ನೇ ಸಾಲಿನವರೆಗೆ ನಗದು ಪುಸ್ತಕ, ಶೇರುದಾರರ ಪಟ್ಟಿ, ಹಣ ಬಟವಾಡೆ ಮಾಡಿದ ರಜಿಸ್ಟರ್, ಹಾಲು ಖರೀದಿಯ ಪುಸ್ತಕ, ಸೊಸೈಟಿಯ ಬೈಲಾ, ಸ್ಟಾಕ್ ಪುಸ್ತಕ, ಡೈಯರಿ ರಜಿಸ್ಟರ್ ಹೀಗೆ ಯಾವುದೇ ದಾಖಲೆಗಳನ್ನು ಅಮಾನತ್ತು ಪಂಚನಾಮೆ ಸಮಯದಲ್ಲಿ ತನಿಖಾಧಿಕಾರಿಗಳಿಗೆ ಕೊಟ್ಟಿಲ್ಲ. ಅಲ್ಲದೇ ನಂತರ ಹಾಜರುಪಡಿಸುವಂತೆ ನೋಟಿಸ್ ಕೊಟ್ಟರೂ ಸಹ ಹಾಜರುಪಡಿಸಿಲ್ಲ. ವೇ ಸ್ಕೇಲ್ ಮತ್ತು ಕಂಪ್ಯೂಟರ್ ಹಾರ್ಡ ಡಿಸ್ಕ್ ಬಗ್ಗೆ ವಿಚಾರಣೆ ಮಾಡಿದಾಗ ದಿ: 4-1-2013 ರಂದು ಕೆಲವು ಕಿಡಿಗೇಡಿಗಳು ತೂಕದ ಯಂತ್ರ, ಹಾರ್ಡ ಡಿಸ್ಕ್, ಚೇರ್, ಬಾಗಿಲು ಬೀಗಗಳನ್ನು ಒಡೆದು

N. Ananda.

ಹಾಕಿದ್ದಾರೆ ಅಂತ ಬಿಡದಿ ಪೊಲೀಸ್ ಠಾಣೆಗೆ ದೂರು ಕೊಟ್ಟಿರುವುದಾಗಿ ಹೇಳಿದ್ದು. ಈ ರೀತಿಯ ಯಾವುದೇ ದೂರು ಸಲ್ಲಿಸಿಲ್ಲ ಅಂತ ಸದರಿ ಠಾಣೆಯ ಠಾಣಾಧಿಕಾರಿಗಳು ಹೇಳಿದ್ದಾರೆ. ಆಡಳಿತ ಮಂಡಳಿಯ ಸಭೆಗಳನ್ನು ನಡೆಸದೇ ನೆಪ ಮಾತ್ರ ಚರ್ಚೆ ನಡೆಸಿದಂತೆ ತೋರಿಸಿದ್ದು. ಪೋರ್ಜರಿ ಸಹಿಗಳನ್ನು ಮಾಡಿ ಹಾಲು ಉತ್ಪಾದಕರ ಹೆಸರಿನಲ್ಲಿ ಹಣ ಪಡೆದಿರುವುದು ಕಂಡುಬಂದಿದೆ. ಸಂಘದ ಅಧ್ಯಕ್ಷರ ಅನುಮತಿಯಿಲ್ಲದೇ ರೂ.3 ಲಕ್ಷಗಳನ್ನು ಎಫ್.ಡಿ. ಮಾಡಿದ್ದು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ 5ನೇ ಎದುರುದಾರರು ತಮ್ಮ ಕಛೇರಿಯಲ್ಲಿ ದೂರು ದಾಖಲಾಗಿದ್ದರೂ ಸಹ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

6. 3ನೇ ಎದುರುದಾರರು ವಿಸ್ತರಣಾಧಿಕಾರಿಯಾಗಿದ್ದು, ಹಾಲಿನ ಗುಣಮಟ್ಟಣವನ್ನು ಉತ್ತಮಗೊಳಿಸುವ ಕುರಿತು ಸೂಚನೆ ನೀಡುವುದು, ಪೂರಕ ಸಾಮಗ್ರಿಗಳನ್ನು ಉತ್ಪಾದಕರಿಗೆ ಒದಗಿಸುವುದು. ಸಂಘದ ಆಡಳಿತ ಮಂಡಳಿಗೆ ಅಗತ್ಯವಿದ್ದಲ್ಲಿ ಸಮಜಾಯಿಷಿಗಳನ್ನು ಕೊಡುವುದು. ಲೆಕ್ಕ-ಪತ್ರಗಳನ್ನು ಬರೆಯದೇ ಇದ್ದಲ್ಲಿ ಆಡಳಿತ ಮಂಡಳಿಗೆ ದೂರು ನೀಡುವುದು ಅವರ ಕರ್ತವ್ಯವಾಗಿದ್ದರೂ ಸಹ ಆಡಳಿತ ಮಂಡಳಿಗೆ ಮತ್ತು ಮೇಲಾಧಿಕಾರಿಗಳಿಗೆ ತಿಳಿಸದೇ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

7. 5ನೇ ಎದುರುದಾರರು – ಸಹಾಯಕ ನಿಬಂಧಕರಾಗಿದ್ದು, ಉಪ-ನಿಬಂಧಕರು, ರಾಮನಗರ ಇವರಿಗೆ ಕ್ರಮ ಕೈಗೊಳ್ಳುವಂತೆ ಸ್ಪಷ್ಟ ನಿರ್ದೇಶನ ನೀಡಿದ್ದರೂ ಸಹ ಇವರು, ಸದರಿ ಸಂಘಕ್ಕೆ ಭೇಟಿ ನೀಡದೇ, ಪರಿಶೀಲನೆ ನಡೆಸದೇ, ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳೊಂದಿಗೆ ಶ್ಯಾಮೀಲಾಗಿರುವುದು ಕಂಡುಬಂದಿರುತ್ತದೆ. ಈ ಎಲ್ಲಾ ಲೋಪದೋಷಗಳ ಬಗ್ಗೆ ಈ ಸಂಸ್ಥೆಗುಲ್ಲಿ ದೂರು ದಾಖಲಾದ ನಂತರ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಕಲಂ 65 ಸಹಕಾರ ಸಂಘಗಳ ಅಧಿನಿಯಮ-1959 ರಲ್ಲಿ ವಿಧಿಸಿರುವಂತೆ ಪರಿವೀಕ್ಷಣೆಗೆ ನೇಮಕ ಮಾಡದೇ ಉದ್ದೇಶಪೂರ್ವಕವಾಗಿ ಉಪ-ನಿಬಂಧಕರ ಕಛೇರಿಯ ಒಬ್ಬ ವರ್ಗಾವಣೆ ಆಗುತ್ತಿರುವ ಸಿಬ್ಬಂದಿಯನ್ನು ಪರಿವೀಕ್ಷಣಾಧಿಕಾರಿಯನ್ನಾಗಿ ನೇಮಿಸಿ ಕರ್ತವ್ಯದಲ್ಲಿ ಉದಾಶೀನತೆ ಹಾಗೂ ವಿಳಂಬ ನೀತಿಯನ್ನು ಉದ್ದೇಶ ಪೂರ್ವಕವಾಗಿ ಮಾಡಿರುವುದು ಕಂಡುಬಂದಿರುತ್ತದೆ.

8. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, 1, 2, 3 ಮತ್ತು 5ನೇ ಎದುರುದಾರರು ಸತತವಾದ ದುರ್ನಡತೆಯನ್ನು ಹೊಂದಿರುವುದಾಗಿ ತೋರಿಸುತ್ತದೆ.

9. ಈ ಮೇಲ್ಕಂಡ ಅಂಶ ಮತ್ತು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ 1, 2, 3 ಮತ್ತು 5ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ

N. Anand

ತೋರಿಸಿರುವುದಲ್ಲದೆ. ಕರ್ತವ್ಯಲೋಪ ಎಸಗಿರುವುದಾಗಿ ಕಂಡುಬಂದಿರುತ್ತದೆ. ಆದ್ದರಿಂದ 1. 2. 3 ಮತ್ತು 5ನೇ ಎದುರುದಾರರು. ಸರ್ಕಾರಿ/ಸಾರ್ವಜನಿಕ ನೌಕರರಾಗಲು ಅನರ್ಹರು ಹಾಗೂ ಶಿಸ್ತು ಕ್ರಮಕ್ಕೆ ಒಳಪಡಿಸಲು ಸಕ್ಷಮ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ ಅವರಿಗೆ ವೀಕ್ಷಣಾ ಟಿಪ್ಪಣಿಯನ್ನು ತಯಾರಿಸಿ ಸದರಿ ಎದುರುದಾರರ ಮೇಲೆ ಅದನ್ನು ಜಾರಿಗೊಳಿಸಿ ಅವರಿಂದ ಉತ್ತರವನ್ನು ಪಡೆಯಲಾಗಿದೆ.

10. 1ನೇ ಎದುರುದಾರರು ದಿನಾಂಕ: 23-4-2018 ರಂದು ಸಲ್ಲಿಸಿರುವ ತಮ್ಮ ಆಕ್ಷೇಪಣೆಯಲ್ಲಿ ಅವರು ರಾಮನಗರ ತಾಲ್ಲೂಕಿನ ಉಪವ್ಯವಸ್ಥಾಪಕರಾಗಿದ್ದ ಅವಧಿಯಲ್ಲಿ ಅವರ ಅಧೀನ ಬರುವ ಎಲ್ಲಾ ವಿಸ್ತರಣಾಧಿಕಾರಿಗಳು ಹಾಗೂ ಪಶು ವೈದ್ಯಾಧಿಕಾರಿಗಳ ಮುಖಾಂತರ ಬೆಂಗಳೂರು ಹಾಲು ಒಕ್ಕೂಟದಿಂದ ಸಿಗುವ ಎಲ್ಲಾ ತಾಂತ್ರಿಕ ಸೌಲಭ್ಯಗಳನ್ನು ಹಾಲು ಉತ್ಪಾದಕರಿಗೆ/ಸಂಘಗಳಿಗೆ ತಲುಪಿಸುವ ಜವಾಬ್ದಾರಿ ಅವರದ್ದಾಗಿರುತ್ತದೆ ಮತ್ತು ನೇರವಾಗಿ ಸಂಘದ ಉಸ್ತುವಾರಿಯನ್ನು ನೋಡಿಕೊಳ್ಳುವ ಜವಾಬ್ದಾರಿ ಅವರದ್ದಾಗಿರುವುದಿಲ್ಲ ಎಂದು ಸಲ್ಲಿಸಿರುತ್ತಾರೆ. ಮುಂದುವರೆದು, ಸಂಘದ ಆಡಳಿತ ಮಂಡಳಿಗೆ ಅಗತ್ಯವಿದ್ದಲ್ಲಿ ಸಮಜಾಯಿಷಿಗಳನ್ನು ಕೊಡುವುದು, ಲೆಕ್ಕಪತ್ರಗಳನ್ನು ಬರೆಯದೇ ಇದ್ದಲ್ಲಿ ಆಡಳಿತ ಮಂಡಳಿಗೆ ದೂರು ನೀಡಲು ವಿಸ್ತರಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ. ಸಂಘದ ಆಡಳಿತ ಮಂಡಳಿಯು ಒಂದು ಸ್ವತಂತ್ರ ಸಂಸ್ಥೆಯಾಗಿದ್ದು, ಅದರ ದೈನಂದಿನ ಚಟುವಟಿಕೆಗಳ ಮೇಲೆ ಯಾವುದೇ ಕಾನೂನು ಕ್ರಮ ಜರುಗಿಸಲು ತಮ್ಮ ವ್ಯಾಪ್ತಿಗೆ ಬರುವುದಿಲ್ಲ, ಆದಕಾರಣ ಸಂಘದ ಕಾರ್ಯದರ್ಶಿಯಾಗಲೀ, ಅಧ್ಯಕ್ಷರ ಜೊತೆ ಅವರಿಗೆ ಯಾವುದೇ ವಿಷಯದಲ್ಲಿ ಕೈಜೋಡಿಸುವ ಪ್ರಮೇಯ ಬರುವುದಿಲ್ಲ ಮತ್ತು ಬಿ.ನಾಗರಾಜ ರವರು ಸಲ್ಲಿಸಿರುವ ಖಾಸಗಿ ದೂರಿನಲ್ಲಿ ಇವರ ವಿರುದ್ಧ ಯಾವುದೇ ಆರೋಪಗಳನ್ನು ಮಾಡಿರುವುದಿಲ್ಲವಾದ ಕಾರಣ ಇವರ ಮೇಲಿರುವ ಆರೋಪಗಳು ನಿರಾಧಾರವಾಗಿರುತ್ತವೆ ಮತ್ತು ರಾಜಕೀಯ ಪ್ರೇರಿತವಾಗಿರುತ್ತವೆ ಎಂದು ಸಲ್ಲಿಸಿರುತ್ತಾರೆ.

11. 2ನೇ ಎದುರುದಾರರು ದಿನಾಂಕ: 30/08/2018ರಂದು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿ, ಈ ಕಚೇರಿಯಿಂದ ನೀಡಲಾದ ವೀಕ್ಷಣಾ ಟಿಪ್ಪಣಿಯಲ್ಲಿನ ವಿಷಯವನ್ನು ಸುಳ್ಳೆಂದು ಅಲ್ಲಗಳೆದಿರುವುದಲ್ಲದೇ ಖಾಸಗಿ ದೂರನ್ನು ಸಲ್ಲಿಸಿದ ನಾಗರಾಜನು ಎದುರುದಾರರ ಮೇಲೆ ದುರುದ್ದೇಶ ಪೂರ್ವಕವಾಗಿ ಇಲ್ಲಸಲ್ಲದ ಆರೋಪವನ್ನು ಹೊರಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆ. ಆದ್ದರಿಂದ, ಅವರ ವಿರುದ್ಧ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದದ್ದು ಎಂದು ತಿಳಿಸಿರುತ್ತಾರೆ.

12. 3ನೇ ಎದುರುದಾರರು ದಿನಾಂಕ: 23-3-2018 ರಂದು ಸಲ್ಲಿಸಿರುವ ತಮ್ಮ ತಕರಾರು/ಉತ್ತರದಲ್ಲಿ ಅವರು ಸಂಘದ ಪಶು ಆಹಾರ ಮಾರಾಟಕ್ಕೆ ಹೆಚ್ಚಿನ ಹಣ ಪಡೆಯುವ

N. Anand

ಬಗ್ಗೆ, ಬಟವಾಡೆ ರಜಿಸ್ಟರ್‌ನಲ್ಲಿ ಬಟವಾಡೆ ಮೊತ್ತದ ವ್ಯತ್ಯಾಸ ಮತ್ತು ಒಂದೇ ಉತ್ಪಾದಕರ ಹೆಸರಿನಲ್ಲಿ 2 ಬಾರಿ ಬಟವಾಡೆ ಸಹಿ ಹಾಕಿರುವ ಬಗ್ಗೆ ಬೆನಾಮಿ ಕಾರ್ಡ ಬಗ್ಗೆ ಕಾರ್ಯದರ್ಶಿಗೆ ದಿನಾಂಕ: 5-1-2013 ರಂದು ಮೊದಲನೇ ನೋಟಿಸ್. ದಿ: 15-1-2013ರಂದು ಕಾರ್ಯದರ್ಶಿ ಮತ್ತು ಕಾರ್ಯಕಾರಿ ಮಂಡಳಿಗೆ 2ನೇ ನೋಟಿಸ್ ನೀಡಿರುವುದಾಗಿ ತಿಳಿಸಿದ್ದಾರೆ. ದಿನಾಂಕ: 17-1-2013, 22-1-2013, ಮತ್ತು 31-1-2013 ರಂದು ಕಾರ್ಯದರ್ಶಿ ಮತ್ತು ಅಧ್ಯಕ್ಷರಿಗೆ ಸದರಿ ವಿಷಯದ ಬಗ್ಗೆ ಅಂತಿಮ ನೋಟಿಸ್ ನೀಡಿರುವುದಾಗಿ ತಿಳಿಸುತ್ತಾ ದಿನಾಂಕ: 19-2-2013 ರಂದು ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಇವರಿಗೆ ಮತ್ತು ದಿನಾಂಕ: 18-4-2013 ರಂದು ಉಪ ವ್ಯವಸ್ಥಾಪಕರು, ಇವರಿಗೆ ಸಂಘದ ಕಾರ್ಯದರ್ಶಿಯ ದುರ್ನಡತೆ ಮತ್ತು ಹಣ ದುರುಪಯೋಗ ಹಾಗೂ ಹಣದ ಲೆಕ್ಕ ಪತ್ರಗಳನ್ನು ಇಟ್ಟುಕೊಳ್ಳದಿರುವ ಬಗ್ಗೆ ಸೂಕ್ತ ಕ್ರಮ ಜರುಗಿಸಲು ನಿವೇದಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ದಿನಾಂಕ: 24-4-2013 ರಂದು ಕಾರ್ಯದರ್ಶಿಯವರಿಗೆ ದುರ್ನಡತೆಯ ಬಗ್ಗೆ ನೋಟಿಸ್ ನೀಡಿದ್ದರೂ ಸಹ ಅವರು ಯಾವುದೇ ಪ್ರತ್ಯುತ್ತರ ನೀಡದಿದ್ದಾಗ ದಿನಾಂಕ: 10-5-2013 ರಂದು ಸಹಾಯಕ ನಿಬಂಧಕರಿಗೆ ಮತ್ತು ದಿನಾಂಕ: 17-5-2013 ರಂದು ಉಪ ವ್ಯವಸ್ಥಾಪಕರಿಗೆ ಪತ್ರ ಬರೆದು ಸದರಿ ಕಾರ್ಯದರ್ಶಿಯ ಮೇಲೆ ಕ್ರಮ ಜರುಗಿಸಲು ಕೋರಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಈ ಮೂಲಕವಾಗಿ ಸದರಿ ಎದುರುದಾರರ ಮೇಲೆ ಮಾಡಿರುವ ಆರೋಪಗಳನ್ನು ಅಲ್ಲಗಳೆದು ತಮ್ಮನ್ನು ಈ ಪ್ರಕರಣದಿಂದ ಕೈಬಿಡಲು ಕೋರಿರುತ್ತಾರೆ.

13. 5ನೇ ಎದುರುದಾರರು ದಿನಾಂಕ: 10-4-2018 ರ ತಮ್ಮ ತಕರಾರು/ಉತ್ತರದಲ್ಲಿ ಈ ಸಂಸ್ಥೆಯಲ್ಲಿ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೊಂದು ದೂರು ಕಂಪ್ಲೇಂಟ್/ ಉಪಲೋಕ್/ಬಿಡಿ/549/2013 ಎಂದು ದಾಖಲಾಗಿದ್ದು ಅದರಲ್ಲಿ ಈಗಾಗಲೇ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುವುದಾಗಿ ತಿಳಿಸುತ್ತಾ, ಎದುರುದಾರರ ವಿರುದ್ಧ ಈ ಪ್ರಕರಣದಲ್ಲಿ ಮಾಡಲಾಗಿರುವ ಆರೋಪಗಳ ಮೇಲೆ ಈಗಾಗಲೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರೀತ್ಯ ಶಿಸ್ತು ಕ್ರಮ ಜರುಗಿಸಿ ಆ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ದಿನಾಂಕ: 07/02/2015ರ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಬೆಂಗಳೂರು ಇವರ ಆದೇಶದ ಮೂಲಕ ವಿಚಾರಣೆಯನ್ನು ಮುಕ್ತಾಗೊಳಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಮುಂದುವರೆದು 5ನೇ ಎದುರುದಾರರ ವಿರುದ್ಧ ಹೂಡಲಾದ ಪಿ.ಸಿ.ಆರ್. ಸಂಖ್ಯೆ:3/2013ರ ವಿಚಾರಣೆಯನ್ನು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಕ್ರಿಮಿನಲ್ ಪಿಟಿಷನ್ ಸಂಖ್ಯೆ:5154/2015ರಲ್ಲಿ ದಿನಾಂಕ: 03/09/2015ರಂದು ನೀಡಲಾದ ಆದೇಶದ ಮೂಲಕ ಮಧ್ಯಂತರ

ತಡೆಯಾಜ್ಞಾಯನ್ನು ನೀಡಿರುತ್ತಾರೆ ಎಂದು ಸಲ್ಲಿಸಿರುತ್ತಾರೆ. ಆದ್ದರಿಂದ ಈ ಎದುರುದಾರರ ವಿರುದ್ಧ ಮಾಡಲಾದ ಆರೋಪಗಳು ಸತ್ಯಕ್ಕೆ ದೂರವಾಗಿದ್ದು, ಈ ಪ್ರಕರಣವನ್ನು ಮುಕ್ತಾಯಗೊಳಿಸಬೇಕಾಗಿ ಕೋರಿಕೊಂಡಿರುತ್ತಾರೆ.

14. ಈ ಪ್ರಕರಣದಲ್ಲಿ 1, 2, 3 ಮತ್ತು 5ನೇ ಎದುರುದಾರರು ತಮ್ಮ ಕಾರ್ಯವ್ಯಾಪ್ತಿಗೆ ಒಳಪಡುವ ಕರ್ತವ್ಯಗಳನ್ನು ಮಾಡಿರುವುದಾಗಿ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಕಾರ್ಯದರ್ಶಿಯ ದುರ್ನಡತೆಯ ಬಗ್ಗೆ ತಿಳಿಸಿರುವುದಾಗಿ ಹಾಗೂ ಅವರ ವಿರುದ್ಧ ಮಾಡಿರುವ ಆರೋಪಗಳು ತಮ್ಮ ಕಾರ್ಯವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಆಕ್ಷೇಪಣೆಗಳನ್ನು ಸಲ್ಲಿಸಿರುವುದನ್ನು ಮೇಲೆ ನಮೂದಿಸಿದ ಅಂಶಗಳಲ್ಲಿ ಗಮನಿಸಬಹುದಾಗಿದೆ. ಈ ಪ್ರಕರಣದಲ್ಲಿ ತನಿಖೆ ಕೈಗೊಂಡ ತನಿಖಾಧಿಕಾರಿ ಎಲ್ಲಾ ಆರೋಪಿಗಳು ಅಪರಾಧವನ್ನು ಎಸಗುವ ಒಳಸಂಚನ್ನು ಹೊಂದಿರುವುದಾಗಿ ತಿಳಿಸುತ್ತಾ ಅವರ ವಿರುದ್ಧ ಕಲಂ 13(1)(ಸಿ) ಜೊತೆಗೆ ಕಲಂ 13(2) ಲಂಚ ನಿಯೋಧಕ ಕಾಯ್ದೆ ಹಾಗೂ ಕಲಂ 465, 468, 477(ಎ) ಸಹವಾಚಕ ಕಲಂ 120(ಬಿ) ಭಾರತ ದಂಡ ಸಂಹಿತೆಯಂತೆ ಮಾನ್ಯ ನ್ಯಾಯಾಲಯದ ಮುಂದೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು 1, 2, 3 ಮತ್ತು 5ನೇ ಎದುರುದಾರರು ವಿಚಾರಣೆಯ ಸಂದರ್ಭದಲ್ಲಿ ತಮ್ಮ ಹೇಳಿಕೆಯನ್ನು ಸಮರ್ಥವಾಗಿ ಸಾಬೀತುಪಡಿಸಬೇಕಾಗಿರುವುದರಿಂದ ಈ ಹಂತದಲ್ಲಿ ಅವರ ಹೇಳಿಕೆಯ ಅಂಶಗಳನ್ನು ಪರಿಗಣಿಸಲು ಸಾಧ್ಯವಿಲ್ಲ.

15. ಆದ್ದರಿಂದ, 1, 2, 3 ಮತ್ತು 5ನೇ ಎದುರುದಾರರು ನೀಡಿರುವ ಉತ್ತರ/ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ ಅವರು ತಮ್ಮ ವಿರುದ್ಧದ ನಡವಳಿಕೆಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ. ಆದುದರಿಂದ 1, 2, 3 ಮತ್ತು 5ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ಸೇವಕರಾಗಿ ಪರಿಪೂರ್ಣ ಕರ್ತವ್ಯ ಪರಾಯಣತೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

16. ಈ ಪ್ರಕರಣದಲ್ಲಿ 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ತಮ್ಮ ವಿರುದ್ಧ ಮಾಡಲಾದ ಎಲ್ಲಾ ಆರೋಪಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ತಾವು ಸಹಕಾರ ಸಂಘದ ನಿಯಮಗಳಂತೆ ಮತ್ತು ಕಾನೂನಿನ ಪ್ರಕಾರ ಕರ್ತವ್ಯನಿರ್ವಹಿಸಿರುವುದಾಗಿ ಹಾಗೂ ಯಾವುದೇ ದುರ್ನಡತೆಯನ್ನು ಹೊಂದಿರುವುದಿಲ್ಲವೆಂದು ಪ್ರತಿಪಾದಿಸಿರುತ್ತಾರೆ. ಆದರೆ, ಅವರ ವಿರುದ್ಧ ಮಾಡಲಾದ ಆರೋಪಗಳು ಗಂಭೀರ ಸ್ವರೂಪವಾಗಿದ್ದು ಅದನ್ನು ಅಲ್ಲಗಳೆಯುವ ಯಾವುದೇ ದಾಖಲೆಯನ್ನಾಗಲೀ ಅಥವಾ ನಂಬಲರ್ಹ ಹೇಳಿಕೆಯನ್ನಾಗಲೀ

N. Dr. ...

ಸಲ್ಲಿಸಿರುವುದಿಲ್ಲ. ಆದ್ದರಿಂದ, ಈ ತನಿಖೆಯಲ್ಲಿ 2ನೇ ಎದುರುದಾರರು ನೀಡಿರುವ ಹೇಳಿಕೆಯನ್ನು ಸಂಜಸವಾಗಿ ಕಾನೂನು ರೀತ್ಯ ಸ್ವೀಕರಿಸಬಹುದಾದಂತಹ ಅಂಶಗಳು ಒಳಗೊಂಡಿರುವುದಿಲ್ಲ. ತನಿಖಾಧಿಕಾರಿಯ ವರದಿ ಮತ್ತು ಈ ಪ್ರಕರಣದ ದಾಖಲೆಗಳನ್ನು ಪರಿಶೀಲಿಸಲಾಗಿ 2ನೇ ಎದುರುದಾರರು ತಮ್ಮ ಕರ್ತವ್ಯ ಅವಧಿಯಲ್ಲಿ ಅವರ ಹುದ್ದೆಗೆ ತಕ್ಕಂತೆ ಸರಿಯಾಗಿ ದಾಖಲೆಯನ್ನು ನಿರ್ವಹಿಸದೆ ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹ ಧನವನ್ನು ದುರ್ಬಳಕೆ ಮಾಡಿಕೊಂಡು ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದ ಕಾರಣ ಅವರನ್ನು ಬಿಲ್ಲೇದೊಡ್ಡಿ ಹಾಲು ಉತ್ಪಾದಕರ ಸಂಘದ ಕಾರ್ಯದರ್ಶಿ ಸ್ಥಾನದಿಂದ ತೆಗೆದು ಹಾಕುವಂತೆ ಸದರಿ ಸಂಘದ ಆಡಳಿತ ಮಂಡಳಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ಸಹಕಾರ ಇಲಾಖೆಗೆ ಶಿಫಾರಸ್ಸು ಮಾಡಲು ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಅಂಶಗಳು ಕಂಡುಬರುತ್ತವೆ.

17. ಈ ಪ್ರಕರಣದ 5ನೇ ಎದುರುದಾರರು ಮೇಲೆ ವಿವರಿಸಿದ ಅಂಶಗಳನ್ನೊಳಗೊಂಡ ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಗಳೊಂದಿಗೆ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಬೆಂಗಳೂರು ಇವರು ದಿನಾಂಕ: 07/02/2015 ರಂದು ನೀಡಿರುವ ಆದೇಶವನ್ನು ಸಲ್ಲಿಸಿದ್ದು, ಅದನ್ನು ಪರಿಶೀಲಿಸಲಾಗಿ ಸದರಿ ಎದುರುದಾರರು ಹೇಳಿರುವಂತೆ ಅವರ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ಆದೇಶ ನೀಡಲಾಗಿದೆ ಎನ್ನುವ ಅಂಶ ಸತ್ಯವಾಗಿರುವುದಿಲ್ಲ. ಸದರಿ ಆದೇಶದಲ್ಲಿ ಶಿಸ್ತು ಕ್ರಮವನ್ನು ಮತ್ತು ವಿಚಾರಣಾ ವರದಿಯನ್ನು ಪರಿಗಣಿಸಿ ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಆದರೆ, ಸದರಿ ಆದೇಶವು ಈ ಸಂಸ್ಥೆಯಲ್ಲಿ ದಾಖಲಾಗಿರುವ ದೂರು ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಡಿ/594/2013ರಲ್ಲಿ ತನಿಖೆ ಪೂರ್ಣಗೊಳ್ಳುವ ಮುಂಚಿತವಾಗಿಯೇ ನೀಡಿರುವುದು ಕಂಡುಬರುತ್ತದೆ. ಆದ್ದರಿಂದ, ಈ ಪ್ರಕರಣದಲ್ಲಿ ಮೇಲೆ ವಿವರಿಸಿದ ಅಂಶಗಳನ್ನು ಸದರಿ ವಿಚಾರಣೆಯಲ್ಲಿ ಪರಿಗಣಿಸಲಾಗಿರುವುದಿಲ್ಲ. ಈ ಪ್ರಕರಣದಲ್ಲಿ ಕಂಡುಬಂದ ಅಂಶಗಳ ಹಿನ್ನೆಲೆಯಲ್ಲಿ 5ನೇ ಎದುರುದಾರರ ಆಕ್ಷೇಪಣೆಗಳನ್ನು ಸ್ವೀಕರಿಸುವಂತಹ ಸಮಂಜಸ ಕಾರಣಗಳನ್ನು ಅವರು ನೀಡಿರುವುದಿಲ್ಲ. ಹೀಗಾಗಿ ಈ ಪ್ರಕರಣದ 1, 3 ಮತ್ತು 5ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)(i) ರಿಂದ (iii)ರಲ್ಲಿ ವಿವರಿಸಿರುವ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

18. ಆದ್ದರಿಂದ, ಕರ್ನಾಟಕ ಲೋಕಯುಕ್ತ ಕಾಯ್ದೆ 1984 ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ಈ ಕೆಳಗಿನಂತೆ ವರದಿ ಸಲ್ಲಿಸಿದೆ.

(ಎ) ಈ ಪ್ರಕರಣದ 1, 3 ಮತ್ತು 5ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)(i) ರಿಂದ (iii)ರಲ್ಲಿ ವಿವರಿಸಿರುವ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದ ಕಾರಣ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸುವಂತೆ ಮತ್ತು ಅದನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಂತೆ ಈ ಪ್ರಾಧಿಕಾರಕ್ಕೆ ಒಪ್ಪಿಸಲು ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

(ಬಿ) ಈ ಪ್ರಕರಣದ 2ನೇ ಎದುರುದಾರರನ್ನು ಚಿಲ್ಲೆದೊಡ್ಡಿ ಹಾಲು ಉತ್ಪಾದಕರ ಸಂಘದ ಕಾರ್ಯದರ್ಶಿ ಸ್ಥಾನದಿಂದ ತೆಗೆದು ಹಾಕುವಂತೆ ಸದರಿ ಸಂಘದ ಆಡಳಿತ ಮಂಡಳಿಗೆ ಈ ಮೂಲಕ ನಿರ್ದೇಶವನ್ನು ನೀಡಲಾಗಿದೆ.

(ಸಿ) ಈ ಪ್ರಕಣರದಲ್ಲಿ 4ನೇ ಎದುರುದಾರರ ವಿರುದ್ಧ ಯಾವುದೇ ಆರೋಪಗಳು ತನಿಖೆಯಲ್ಲಿ ಸಾಬೀತಾಗದ ಕಾರಣ ಅವರನ್ನು ಈ ಪ್ರಕರಣದಿಂದ ಕೈಬಿಡಲಾಗಿದೆ.

(ಡಿ) ಈ ಪ್ರಕರಣದಲ್ಲಿ 6ನೇ ಎದುರುದಾರರು ಕರ್ನಾಟಕ ಲೋಕಾಯುಕ್ತ ಅಧಿನಿಯಮದ ವ್ಯಾಪ್ತಿಯಲ್ಲಿ ಒಳಪಡದ ಕಾರಣ ಅವರನ್ನೂ ಸಹ ಈ ಪ್ರಕರಣದಿಂದ ಕೈಬಿಡಲಾಗಿದೆ.

19. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anandy 13/11

(ನ್ಯಾಯಮೂರ್ತಿ ಎನ್. ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ